ಕರ್ನಾಟಕ ವಿಧಾನ ಸಭೆ
ಸೋಮವಾರ 02ನೇ ಆಗಸ್ಟ್ 2004ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.30 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಕೃಷ್ಣ) ಪೀಠವನ್ನು ಅಲಂಕರಿಸಿದ್ದರು

ಸರ್ಕಾರಿ ನಿವೇಶನದಲ್ಲಿ ಅತಿಕ್ರಮಣ ಮನೆ ಮಾಡಿ ಕಟ್ಟಿರುವವರಿಗೆ 94ಸಿ ಅರ್ಜಿ ಸಲ್ಲಿಸಲು ಕಾಲಾವಕಾಶದ ಬಗ್ಗೆ

65(387) ಶ್ರೀ ಕೆ. ರಘುಪತಿ ಭಟ್(ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ನಗರ ಮತ್ತು ಗ್ರಾಮ ಪಂಚಾಯತ್‌ಗಳ ಆಸುಪಾಸಿನ ಸರಕಾ ನಿವೇಶನದಲ್ಲಿ ಅತಿಕ್ರಮಣ ಮಾಡಿ ಮನೆ ಕಟ್ಟಿ 94ಸಿ ಅರ್ಜಿಯನ್ನು ಮಂಜೂರಾತಿಗಾಗಿ ಅರ್ಜಿ ಕೊಡದಿರುವವರು ಇನ್ನೂ ಅನೇಕ ಜನರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅಂತಹವರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಸರಕಾರ ಅರ್ಜಿ ಸಲ್ಲಿಸಲು ಇನ್ನೊಮ್ಮೆ ಅವಕಾಶ ನೀಡುವುದೇ ;

ಇ) ಈಗಾಗಲೇ ಅಂತಹ ಅರ್ಜಿ ಸಲ್ಲಿಸಿದ ಪ್ರಕರಣಗಳು ಇತ್ಯರ್ಥವಾಗಲು ಎಷ್ಟು ಬಾಕಿ ಇವೆ;

ಈ) ಇತ್ಯರ್ಥಗೊಂಡವರು ಸರ್ಕಾರಕ್ಕೆ ಕಟ್ಟಬೇಕಾದ ಹಣದಲ್ಲಿ ರಿಯಾಯಿತಿ ನೀಡಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಇಲ್ಲಿ ನಿಯಮಾವಳಿಯಲ್ಲಿ ನಿಗದಿಪಡಿಸಿದ ಗಡುವಿನಲ್ಲಿ ಅಂದರೆ ದಿನಾಂಕ 25.09.2000 ರೊಳಗೆ ಅರ್ಜಿಗಳನ್ನು ನೀಡಲು ಅವಕಾಶ ನೀಡಲಾಗಿತ್ತು. ಈ ಅವಧಿಯನ್ನು ದಿನಾಂಕ 1.1.2002 ರವರೆಗೆ ವಿಸ್ತರಿಸಲಾಯಿತು. ಈ ನಡುವಿನ ನಂತರ ಅರ್ಜಿಗಳನ್ನು ನೀಡಲು ಅವಕಾಶ ಇರುವುದಿಲ್ಲ.

ಆ) 'ಅ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಇ) –"–

ಈ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಶೇಕಡ 50 ರಷ್ಟು ರಿಯಾಯಿತಿ ನೀಡಲಾಗಿದೆ. ಹಾಗೂ ನಗರ ಪ್ರದೇಶದಲ್ಲಿ 20X30 ಮತ್ತು ಗ್ರಾಮಾಂತರ ಪ್ರದೇಶದಲ್ಲಿ 30X40 ಅಡಿ ಅಳತೆಯ ನಿವೇಶನಗಳನ್ನು ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಉಚಿತವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೇ, ಉತ್ತರಗಳನ್ನು ಒದಗಿಸಲಾಗಿದೆ. ಆದರೆ ನಾನು ಸೆಕ್ಷನ್ 94ಸಿ ಪ್ರಕಾರ ಯಾರು ನಿವೇಶನ ರಹಿತರು ಅಕ್ರಮ ಸಕ್ರಮವಾಗಿ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರು, ಅವರಿಗೆ ಅವಧಿಯನ್ನು ಮತ್ತೊಮ್ಮೆ ಈಗಾಗಲೇ ಯಾರು ಸೆಕ್ಷನ್ 94ಸಿ ಪ್ರಕಾರ ಅರ್ಜಿಯನ್ನು ಕೊಡಲಿಲ್ಲವೋ

ಅವರಿಗೆ ಮತ್ತೊಂದು ಅವಧಿಯನ್ನು ಕೊಡಲಿಕ್ಕೆ ಸಾಧ್ಯತೆ ಇದೆಯೇ ಎಂದು ಸರ್ಕಾರವನ್ನು ಕೇಳಿದ್ದೆ. ಆದರೆ ಅದಕ್ಕೆ ಉತ್ತರದಲ್ಲಿ 2002 ರವರೆಗೆ ವಿಸ್ತರಿಸಲಾಗಿದೆ. ಈ ಗಡುವಿನ ನಂತರ ಅರ್ಜಿ ಹಾಕಲು ಮತ್ತೊಮ್ಮೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಸರ್ಕಾರ ಉತ್ತರ ಕೊಟ್ಟಿದೆ. ಆದರೆ ಮಾನ್ಯ ಸಚಿವರಲ್ಲಿ ಕೇಳತಕ್ಕಂಥಾದ್ದು ಏನೆಂದರೆ, ಈಗಾಗಲೇ ಎಲ್ಲಾ ಕ್ಷೇತ್ರಗಳಲ್ಲಿ ಬಹಳಷ್ಟು ಜನ ಕೆಲವು ಮಾಹಿತಿಯ ಕೊರತೆಯಿಂದ, ಅಂದರೆ ಸೆಕ್ಷನ್ 94ಸಿ ಪ್ರಕಾರ ಅರ್ಜಿಯನ್ನು ಕೊಟ್ಟು ಅದನ್ನು ರೆಗ್ಯುಲರೈಸ್ ಮಾಡಲಿಕ್ಕೆ ಆಗುತ್ತದೆ ಎಂದು ಗೊತ್ತಿಲ್ಲದೆ ಅವರು ಅರ್ಜಿಯನ್ನು ಕೊಟ್ಟಿಲ್ಲ. ಅದಕ್ಕಿಂತ ಹೆಚ್ಚಾಗಿ ಕಳೆದ ಇಪ್ಪತ್ತೈದು ಮೂವತ್ತು ವರ್ಷಗಳಿಂದ ವಾಸವಾಗಿದ್ದವರು, ಅವರು ಸಣ್ಣ ಗುಡಿಸಲುಗಳ ತರಹ ಮನೆಗಳನ್ನು ಕಟ್ಟಿಕೊಂಡು ಅಲ್ಲಿ ವಾಸವಾಗಿದ್ದಾರೆ. ಆದರೆ ಅವರಿಗೆ ಸೆಕ್ಷನ್ 94ಸಿ ಅನ್ನುವಂಥಾದ್ದು ಬಂದಿದೆ ಎಂದು 2002ನೇ ಇಸವಿಯವರೆಗೆ ಗೊತ್ತಿಲ್ಲದೆ ಆದಾದನಂತರ ಯಾರ ಹತ್ತಿರವೋ ಕೇಳಿ ತಿಳಿದುಕೊಂಡು ಅರ್ಜಿಯನ್ನು ಕೊಟ್ಟಿದ್ದಾರೆ. ಇವತ್ತು ಅವರು ಈ ನಿವೇಶನಗಳ ಜಾಗದಲ್ಲೇ ಸಣ್ಣ ಗುಡಿಸಲು ಹಾಕಿಕೊಂಡು ವಾಸ್ತವ್ಯ ಹೂಡಿಕೊಂಡಿದ್ದಾರೆ ಅವರಿಗೆ ಮತ್ತೊಂದು ಅವಕಾಶವನ್ನು ಕೊಟ್ಟರೆ ಸರ್ಕಾರ ನ್ಯಾಯ ಒದಗಿಸಿದ ಹಾಗೆ ಆಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ದಯವಿಟ್ಟು ತಾವು ಇನ್ನೊಂದು ಮೂರು ಅಥವಾ ಕನಿಷ್ಟ ಆರು ತಿಂಗಳು ಅವಧಿಯನ್ನು ಕೊಟ್ಟರೆ ಎಲ್ಲಾ ಜನರಿಗೆ ಈಗ ಯಾರು ಅಕ್ರಮವಾಗಿ ವಾಸಿಸಿಕೊಂಡಿದ್ದಾರೆ ಅವರಿಗೆ ಒಂದು ಅವಕಾಶವನ್ನು ಕೊಟ್ಟ ಹಾಗೆ ಆಗುತ್ತದೆ. ಅದನ್ನು ಕೊಡುವಂಥ ಇಚ್ಛೆ ಸರ್ಕಾರಕ್ಕೆ ಇದೆಯೇ, ಮತ್ತೊಮ್ಮೆ ಇದನ್ನು ಪರಿಷ್ಕರಣ ಮಾಡುವಂಥ ಇಚ್ಛೆ ಸರ್ಕಾರಕ್ಕೆ ಇದೆಯೇ ಎಂದು ಕೇಳಲಿಕ್ಕೆ ನಾನು ಇಚ್ಛಿಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ 25.3.2002ರಲ್ಲಿ ಈ ರೀತಿಯಾಗಿ ಪಂಚಾಯಿತಿ ಹಾಗೂ ಸರ್ಕಾರಿ ಜಮೀನಿನಲ್ಲಿ ಅತಿಕ್ರಮಣ ಮಾಡಿಯೋ ಅಥವಾ ಅನಧಿಕೃತವಾಗಿಯೋ ಕಟ್ಟಡವನ್ನು ಕಟ್ಟಿರತಕ್ಕಂಥವರಿಗೆ ಅದನ್ನು ಸಕ್ರಮಗೊಳಿಸಬೇಕು ಎನ್ನುವ ಕಾರಣಕ್ಕಾಗಿ ಅವರಿಗೆ ನಾವು ಅವಧಿಯನ್ನು ಕೊಟ್ಟಿದ್ದೆವು. ಆ ಅವಧಿಯ ಒಳಗಾಗಿ ಅಂದರೆ ಆರು ತಿಂಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸಬೇಕು ಎಂದು ನಿಯಮ ಇತ್ತು. ಆಗ ಸುಮಾರು 2 ಲಕ್ಷ 92 ಸಾವಿರ 74 ಜನರು ಅರ್ಜಿಗಳನ್ನು ಕೊಟ್ಟರು. ಆದಾದ ಮೇಲೆ ಇನ್ನೂ ಸಮಯ ಬೇಕಾಗುತ್ತದೆ, ಬೇರೆಯವರಿಗೆ ಅದರ ತಿಳುವಳಿಕೆ ಇಲ್ಲದೇ ಇರುವ ಕಾರಣಕ್ಕೆ ಅವರು ಅರ್ಜಿಗಳನ್ನು ಕೊಡಲಿಲ್ಲ ಎನ್ನುವ ಕಾರಣ ಇರುವುದರಿಂದ, ಆ ಅವಧಿಯನ್ನು ನಾವು ಮತ್ತೆ ಹೆಚ್ಚುವರಿಗೊಳಿಸಿದ್ದೆವು. ಅಷ್ಟೆಲ್ಲಾ ಆದಮೇಲೆ 1 ಲಕ್ಷ 48 ಸಾವಿರ 503 ಅರ್ಜಿಗಳು ವಿಚಾರಣೆ ಸಂದರ್ಭದಲ್ಲಿ ಅಧಿಕೃತವಾದದ್ದು ಅಲ್ಲ, ಸರ್ಕಾರಿ ಜಮೀನುಗಳು ಅಲ್ಲ ಅಥವಾ ಬೇರೆಯವರಿಗೆ ಸೇರಿರತಕ್ಕಂಥಾದ್ದು ಎಂದು ಈ ಎಲ್ಲಾ ಕಾರಣಗಳಿಗಾಗಿ 1 ಲಕ್ಷ 48 ಸಾವಿರದ 503 ಅರ್ಜಿಗಳು ತಿರಸ್ಕೃತಗೊಂಡವು. ಅವರಲ್ಲಿ 65 ಸಾವಿರದ 304 ಅರ್ಜಿಗಳು ಸರ್ಕಾರದ ಜಮೀನಿನಲೇ ಅನಧಿಕೃತವಾಗಿ ಇದ್ದುದ್ದರಿಂದ ಅದನ್ನು

ಸಕ್ರಮಗೊಳಿಸಲಾಯಿತು. ಅಂದರೆ ಅನೇಕರು ತಮಗೆ ಗೊತ್ತಿಲ್ಲವೆಂದು ಹೇಳಿ ಬೇರೆ ಕಡೆಗೂ ಕೂಡ ಅರ್ಜಿಯನ್ನು ಕೊಟ್ಟುಬಿಡುತ್ತಾರೆ. ಆ ಕಾರಣಕ್ಕಾಗಿ 1 ಲಕ್ಷ 48 ಸಾವಿರಕ್ಕಿಂತಲೂ ಹೆಚ್ಚು ಅರ್ಜಿಗಳು ತಿರಸ್ಕರಿಸಲ್ಪಟ್ಟು ಸುಮಾರು 65 ಸಾವಿರದ 304 ಅರ್ಜಿಗಳನ್ನು ಮಾತ್ರ ಸಕ್ರಮಗೊಳಿಸಿ ನಾವು ಈಗಾಗಲೇ ಕೊಟ್ಟಿದ್ದೇವೆ. ಇನ್ನು ಉಳಿದಂಥವು 78,262 ಅರ್ಜಿಗಳು. ಅವುಗಳನ್ನು ನಾವು 9.9.2003ರೊಳಗಾಗಿ ವಿಲೇವಾರಿ ಮಾಡಬೇಕಾಗಿತ್ತು. ಆದರೆ ಆ ವಿಲೇವಾರಿ ಮಾಡಲಿಕ್ಕೆ ಸಾಧ್ಯವಾಗದೇ ಇದ್ದಂಥ ಚುನಾವಣಾ ಪ್ರಸಂಗಗಳು ಮತ್ತು ಬೇರೆ ಬೇರೆ ಕಾರಣಗಳು ಇದ್ದುದ್ದರಿಂದ ಅವನ್ನು ವಿಲೇವಾರಿ ಮಾಡುವುದಕ್ಕೆ ಆಗದೇ ಇದ್ದುದ್ದರಿಂದ ಮತ್ತೆ ನಾವು ಅದಕ್ಕೆ 8.3.2005 ರವರೆಗೂ ಕೂಡ ಈ ಎಲ್ಲಾ ಇರತಕ್ಕಂಥ ಅರ್ಜಿಗಳ ವಿಲೇವಾರಿಗೆ ನಾವು ಸಮಯವನ್ನು ಕೊಟ್ಟಿದ್ದೇವೆ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ, ಈ ರೀತಿಯಾಗಿ ಪದೆಪದೇ ನಾವು ಇದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರೆ ಅಲ್ಲಿ ಇರತಕ್ಕಂಥ ಸರ್ಕಾರಿ ಜಮೀನುಗಳನ್ನೆಲ್ಲಾ ಅಕ್ರಮಣ ಮಾಡಿಕೊಂಡು ನಿಜವಾಗಿಯೂ ವಾಸಿಸಲಿಕ್ಕೆ ಇಲ್ಲದಂಥ ಜನಗಳು ಅಲ್ಲಿಗೆ ಬಂದು ಅರ್ಜಿಯನ್ನು ಕೊಡುವುದಕ್ಕಿಂತೂ ಹೆಚ್ಚಾಗಿ ಇದು ಮೂಲಕವಾಗಿ ಅನಧಿಕೃತವಾಗಿ ಇರತಕ್ಕಂಥ ಕೆಲವು ಕಿಡಿಗೇಡಿಗಳು, ಕೆಲವು ಆಸ್ತಿಗಳನ್ನು ಅಪಹರಣ ಮಾಡಬೇಕು ಎನ್ನುವಂಥವರು, ಈ ರೀತಿಯಾಗಿ ಇರತಕ್ಕಂಥ ಅತಿಕ್ರಮಣವನ್ನು ಮಾಡಿ ಈ ಒಂದು ವಿಸ್ತರಿಸಿದ ಅವಧಿಯ ಪ್ರಯೋಜನವನ್ನು ಪಡೆದು ಅದರ ಮೂಲಕವಾಗಿ ಅಲ್ಲಿ ಸರ್ಕಾರಿ ಜಾಗ ಒಂದು ಇಂಚೂ ಕೂಡ ಉಳಿಯಲಾರದಂಥ ರೀತಿಯಲ್ಲಿ ಮಾಡುತ್ತಾರೆ. ಮುಂದೆ ಗ್ರಾಮ ಪಂಚಾಯಿತಿಯಲ್ಲಿ ಒಂದು ಕಟ್ಟಡ ಕಟ್ಟಬೇಕಾಗಿದ್ದರೆ ಒಂದು ಶೌಚಾಲಯ ಮಾಡಬೇಕಾಗಿದ್ದರೆ ಅಥವಾ ಊರಿನ ಅಭಿವೃದ್ಧಿಗೆ ಸಂಬಂಧಿಸಿರತಕ್ಕಂಥ ಯುವಕ ಮಂಡಳಿಗೋ, ಯುವತಿ ಮಂಡಳಿಗೋ ನಾವೇನಾದರೂ ಕೊಡಬೇಕೆಂದರೆ, ಒಂದು ಎಕರೆ ಜಾಗ ಸಹಿತ ಉಳಿಯಲಾರದಂಥ ರೀತಿಯಲ್ಲಿ ಆಗುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ಅವಧಿಯನ್ನು ವಿಸ್ತರಿಸುವಂಥ ಪ್ರಸ್ತಾಪ ಸರ್ಕಾರದ ಮುಂದೆ ಇಲ್ಲ. ಆ ವಿಸ್ತಾರ ಮಾಡುವಂಥಾದ್ದರ ಬಗ್ಗೆ ನಾವು ಗಮನವನ್ನು ಕೊಡುವುದಿಲ್ಲ. ದಯವಿಟ್ಟು ಮಾನ್ಯ ಶಾಸಕರು ಈ ಜವಾಬ್ದಾರಿಯನ್ನು ಸಹ ಗುರುತಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೇ, ನಾನು ಹೇಳಿದಂಥಾದ್ದು ಅದಲ್ಲ. 2002 ರೊಳಗೆ ಅರ್ಜಿ ಕೊಟ್ಟವರದ್ದು. ರಿಜೆಕ್ಟ್ ಆದದ್ದು ಸರಿ ಇದೆ. ಏಕೆಂದರೆ, ಕೆಲವರು ಸರ್ಕಾರದ ಜಮೀನು ಅಲ್ಲದಿದ್ದಲ್ಲಿ, ಕೆಲವರು ಒಮ್ಮೆ ನಿವೇಶನ ಇದ್ದವರು ಇನ್ನೊಂದು ಕಡೆ ಅರ್ಜಿ ಹಾಕಿದ್ದಾರೆ. ಅವರಿಗೆ ರಿಜೆಕ್ಟ್ ಆಗಿದೆ, ಅದಕ್ಕೆ ನನ್ನದೇನೂ ಆಕ್ಷೇಪ ಇಲ್ಲ. ಏಕೆಂದರೆ ಸರ್ಕಾರ ನ್ಯಾಯಯುತವಾಗಿ ಯಾರಿಗೆ ಕೊಡಬೇಕಾಗಿದೆ. ಅವರಿಗೆ ಕೊಡಬೇಕು. ನನ್ನ ಪ್ರಶ್ನೆ ಏನೆಂದರೆ, 2002 ರ ನಂತರ ಕೆಲವರು ಅರ್ಜಿ ಕೊಟ್ಟಿದ್ದಾರೆ. ಏಕೆಂದರೆ, ಅವರಿಗೆ ಮಾಹಿತಿಯ ಕೊರತೆ ಇತ್ತು. ಅವರು ಬಹಳ ಬಡವರಾದ್ದರಿಂದ ಅವರಿಗೆ ಯಾರೂ ತಿಳಿಸಲಿಲ್ಲ. ಇಂಥಾದ್ದು ಒಂದು ಅರ್ಜಿ ಕೊಡುವಂಥ ಅವಕಾಶವಿದೆ ಎಂಬುದು ತಿಳಿಯದೆ, ಕೆಲವರದ್ದು ಬಾಕಿ ಇದೆ. ಈ ಅರ್ಜಿ ಕೊಡದಿದ್ದವರಿಗೆ ಒಂದು ಅವಕಾಶವನ್ನು, ಹೊಸದಾಗಿ

ಅರ್ಜಿ ಕೊಡುವುದಕ್ಕೆ ಮೂರು ತಿಂಗಳು, ಆರು ತಿಂಗಳು ಒಮ್ಮೆ ಕೊಟ್ಟರೆ ಅನುಕೂಲವಾಗುತ್ತದೆ. ಈಗಾಗಲೇ ಕಟ್ಟಿ ಆಗಿದೆ, ಸರ್ಕಾರದಿಂದ ಅವರನ್ನು ಎಬ್ಬಿಸುವಂಥ ಅವಕಾಶ ಇಲ್ಲ. ಉಡುಪಿ ಕ್ಷೇತ್ರದಲ್ಲಿ ಸುಮಾರು ಎಂಟು ನೂರಕ್ಕಿಂತಲೂ ಹೆಚ್ಚು ಮನೆಗಳೂ, ಮೂರು ಸೆಂಟ್ಸ್ ಐದು ಸೆಂಟ್ಸ್ ಜಾಗದಲ್ಲಿ ಕಟ್ಟಿಕೊಂಡು ಕುಳಿತುಕೊಂಡಾಗಿದೆ. ಇವತ್ತು ಸರ್ಕಾರ ಅವರನ್ನು ಎಬ್ಬಿಸುವಂಥ ಪ್ರಮೇಯವೇ ಇಲ್ಲ ಆದರೆ, ಅವರು ಇವತ್ತು ಕುಳಿತುಕೊಂಡಿದ್ದಾರೆ. ಅವರಿಗೆ ಯಾವುದೇ ರೇಷನ್ ಕಾರ್ಡ್ ಆಗಲೇ ಎಲೆಕ್ಟ್ರಿಫಿಕೇಷನ್ ಆಗಲೀ, ಯಾವುದೂ ಇಲ್ಲದಿದ್ದಂಥ ಪರಿಸ್ಥಿತಿ ಆಗಿದೆ. ಸರ್ಕಾರದಲ್ಲಿ ಈಗಾಗಲೇ ಸೆಕ್ಷನ್ 94(ಸಿ) ಪ್ರಕಾರ ಅರ್ಜಿ ತೆಗೆದುಕೊಂಡು, ಅದು ರಿಜಿಕ್ಟ್ ಆದುದ್ದಕ್ಕೆ ನನ್ನದೇನೂ ಆಕ್ಷೇಪ ಇಲ್ಲ. ಏಕೆಂದರೆ, ಅದು ಕಾನೂನು ಪ್ರಕಾರ ಆಗದಿದ್ದಂಥಾದ್ದು. ಇವತ್ತು ನಾನು ಕೇಳುತ್ತಿರುವಂಥಾದ್ದು, ಕೆಲವರಿಗೆ ಮಾಹಿತಿಯ ಕೊರತೆಯಿಂದ ಬಹಳ ಪ್ರಾಮುಖ್ಯವಾಗಿ ಇಂಥಾದೊಂದು ಅವಕಾಶವಿದೆ ಎಂದು ಗೊತ್ತಿಲ್ಲದೆ, ಕೆಲವರು ಅರ್ಜಿ ಹಾಕದೇ ಬಿಟ್ಟಿದ್ದಾರೆ. ಅಂಥವರಿಗೆ, ಮೂರು ತಿಂಗಳು ಅಥವಾ ಆರು ತಿಂಗಳು ಕಾಲಾವಧಿಯನ್ನು ಕೊಟ್ಟರೆ ಆ ಬಡವರಿಗೆ ಅನುಕೂಲವಾಗುತ್ತದೆ. ಏಕೆಂದರೆ ಅವರು ನಿವೇಶನ ಇಲ್ಲದಿದ್ದವರು. ತಾವು ಹೇಳಿದ ಹಾಗೆ ಕಿಡಿಗೇಡಿಗಳು ಮಾಡುತ್ತಾರೆ, ಅವರಿಗೆ ನಾವು ಸಕ್ರಿಯೆ ಮಾಡಬಾರದು. ಅದನ್ನು ನಾನು ಒಪ್ಪುತ್ತೇನೆ. ಆದರೆ, ನಿವೇಶನ ಇಲ್ಲದಿದ್ದವರು ಬಹಳಷ್ಟು ಜನ, ಯಾವುದಾದರೂ ಗ್ರಾಮ ಪಂಚಾಯ್ತಿ ಸದಸ್ಯರು ಅಥವಾ ಅಧ್ಯಕ್ಷರು ಸೂಚಿಸಿ, ಒಂದು ಕಡೆ ಕೂರಿಸಿಬಿಟ್ಟಿರುತ್ತಾರೆ. ಅವರಿಗೀಗ ನಾವು ಒಂದು ಅವಕಾಶವನ್ನು ಕೊಡಲಿಲ್ಲವೆಂದರೆ, ನನ್ನ ಕ್ಷೇತ್ರದಲ್ಲೇ ಸುಮಾರು ಎಂಟು ನೂರಕ್ಕಿಂತಲೂ ಹೆಚ್ಚು ರಿಜೆಕ್ಟ್ ಆಗದೇ ಇದ್ದಂಥವರು ಅಂದರೆ, ಅರ್ಜಿ ಕೊಡಲಿಕ್ಕೇ ಬಾಕಿ ಇರುವಂಥವರು ಇದ್ದಾರೆ. ಅವರು ಸುಮಾರು 15–20 ವರ್ಷದಿಂದ ಅಲ್ಲಿ ವಾಸವಿರುವ ಬಗ್ಗೆ ಅಲ್ಲಿ ಪುರಾವೆಗಳು ಇವೆ. ಅದಕ್ಕಾಗಿ, ಅಂತಹವರಿಗೆ ಮೂರು ತಿಂಗಳು, ಆರು ತಿಂಗಳು ಅವಕಾಸ ಕೊಟ್ಟರೆ ಒಳ್ಳೆಯದಾಗಬಹುದು. ಅದನ್ನು ಸರ್ಕಾರ ಮಾಡುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಇವರಿಗೆ ಅಲ್ಪಾವಧಿಯ ಮೂರು ತಿಂಗಳ ಕೊನೆಯ ಅವಕಾಶವನ್ನು ಸರ್ಕಾರ ಕೊಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿಯ ಭಾಗದಲ್ಲಿ, ಆ ಕಡಲ ಪಕ್ಕದಲ್ಲಿರತಕ್ಕ ಜಮೀನಿನ ಅವಶ್ಯಕತೆ ಬಹಳ ಇದೆ. ಅಲ್ಲಿ ಜನಸಾಂದ್ರತೆ ಮತ್ತು ಒತ್ತಡಗಳಿರುವುದರಿಂದ, ಭೂ ಬೆಲೆ ಕೂಡ ಹೆಚ್ಚಾಗಿರತಕ್ಕಂಥಾದ್ದು ಗೊತ್ತಿದೆ. ಅಲ್ಲಿ ಒಂದು ಕಡೆಗೆ ಪಶ್ಚಿಮ ಘಟ್ಟ ಮತ್ತೊಂದು ಕಡೆಗೆ ಸಮುದ್ರ. ಅಲ್ಲಿರುವಂಥ ಭೂ ಭಾಗದಲ್ಲಿ ಎಲ್ಲರು ಬದುಕಬೇಕಾದಂಥ ಅನಿವಾರ್ಯತೆ ಇರುವುದರಿಂದ, ಅಲ್ಲಿ ಹೆಚ್ಚಿನ ಬೆಲೆ ಇರತಕ್ಕಂಥಾದ್ದು ಗೊತ್ತಿದೆ. ನಾನು ಹೇಳತಕ್ಕಂಥಾದ್ದು, ಯಾರ ಅರ್ಜಿಗಳನ್ನು ತಿರಸ್ಕಾರ ಮಾಡಿದ್ದೇವೆ. ಅವುಗಳ ಬಗ್ಗೆ ಪುನರ್ ಪರಿಶೀಲನೆ ಮಾಡುವಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಇಲ್ಲಿ ಬಂದಿರತಕ್ಕಂಥ ಪ್ರಶ್ನೆ ಇಷ್ಟೆ. ಭೂ ಮಾಲೀಕರು ಅಲ್ಲದೇ [illegible]

ಅತಿಕ್ರಮಣವಾಗಿ ಕಟ್ಟಡ ಕಟ್ಟಡದೇ ಇರತಕ್ಕಂಥವರು, ಈ ಮೂಲಕವಾಗಿ ಮತ್ತೆ ಅನುಕೂಲಗಳನ್ನು ಪಡೆಯಬೇಕೆಂದು ಈ ತರಹದಲ್ಲಿ ಅರ್ಜಿ ಕೊಡಲಿಕ್ಕೆ ಪ್ರಯತ್ನ ಮಾಡತಕ್ಕಂಥ ಸಮಾಜಬಾಹಿರ ಶಕ್ತಿಗಳು ಕೂಡ ಇವೆ. ನ್ಯಾಯಯುತವಾಗಿ ಅರ್ಜಿ ಕೊಡತಕ್ಕಂಥ ವ್ಯಕ್ತಿಗಳ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ. ಆದರೆ, ಅವರ ಹೆಸರಿನಲ್ಲಿ ಈ ಭೂಮಿಯನ್ನು ಕಬಳಿಸಬೇಕೆನ್ನುವಂಥ ದೃಷ್ಟಿಯಿಂದ ಬಹಳ ಜನಗಳು ಸೇರಿರತಕ್ಕಂಥಾದ್ದು ಕೂಡ ಸರ್ಕಾರದ ಗಮನಕ್ಕೆ ಬಂದಿರತಕ್ಕ ಹಿನ್ನೆಲೆಯಲ್ಲಿ, ತಾವೇನು ಸೂಚನೆಯನ್ನು ಕೊಟ್ಟಿದ್ದೀರಿ, ಅದನ್ನು ಸರ್ಕಾರ ಪರಿಶೀಲಿಸುತ್ತದೆ. ಆದರೆ, ಸಧ್ಯಕ್ಕೆ ಮಾತ್ರ ಅವಕಾಶಗಳು ಇಲ್ಲ. ಈಗಿರುವಂಥ ಎಪ್ಪತ್ತೆಂಟು ಸಾವಿರಕ್ಕಿಂತ ಹೆಚ್ಚು ಅರ್ಜಿಗಳನ್ನು ವಿಲೇವಾರಿ 2005ರ ಒಂಭತ್ತನೇ ತಿಂಗಳೊಳಗಾಗಿ ಮಾಡುತ್ತೇವೆ. ತಮ್ಮ ಸಲಹೆಯನ್ನು ನಾವು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

ಕಳೆದ ಮೂರು ವರ್ಷಗಳಲ್ಲಿ ಬಗರ್‌ಹುಕಂ ಸಾಗುವಳಿದಾರರಿಗೆ ಭೂಮಿ ಮಂಜೂರು.

64(347) ಶ್ರೀ ಶ್ರೀರಾಮರೆಡ್ಡಿ(ಬಾಗೇಪಲ್ಲಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನ ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ಮಂಜೂರು ಮಾಡಲಾಗಿದೆ ಮತ್ತು ಅದರ ವಿಸ್ತೀರ್ಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) ವಿಲೇವಾರಿಯಾಗದೆ ಉಳಿದಿರುವ ಬಗರ್ ಹುಕುಂ ದರಖಾಸ್ತು ಜಮೀನುಗಳನ್ನು ವಿಲೇವಾರಿ ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

ಇ) ಬಗರ್ ಹುಕುಂ ಸಾಗುವಳಿದಾರರು ಈ ಹಿಂದೆ ಅರ್ಜಿ ಸಲ್ಲಿಸದೇ ಇದ್ದರೆ ಅಂತಹವರಿಗೆ ಈಗ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು ;

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಅನುಬಂಧ (1)ರಲ್ಲಿರುವಂತೆ ವಿವರ ನೀಡಲಾಗಿದೆ.

ಆ) ಸರ್ಕಾರಿ ಅಧಿಸೂಚನೆ ಸಂ. ಸಂವ್ಯಶಾಇ 87 ಶಾಸನ 2003 ದಿನಾಂಕ 19.03.2004 ರನ್ವಯ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94(ಬಿ)ಗೆ ತಿದ್ದುಪಡಿ ತರಲಾಗಿದ್ದು ವಿಲೇವಾರಿಯಾಗದೇ ಉಳಿದಿರುವ ಬಗರ್ ಹುಕುಂ ದರಖಾಸ್ತು ಜಮೀನುಗಳನ್ನು ವಿಲೇವಾರಿಗಾಗಿ ಕಾಲವಕಾಶ ವಿಸ್ತರಿಸಲಾಗಿದೆ. ಅದರಂತೆ ಈ ಬಾಕಿ ಅರ್ಜಿಗಳನ್ನು ದಿನಾಂಕ 27.04.2005ರೊಳಗೆ ವಿಲೇವಾರಿ ಮಾಡಲು ಕಾಲಾವಕಾಶ ಕಲ್ಪಿಸಲಾಗಿದೆ.

ಇ) ಸಧ್ಯಕ್ಕೆ ಪ್ರಸ್ತಾಪ ಇಲ್ಲ.